ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/08/ನೇ.ವಿ/2026 (ಆರ್‌ಪಿಸಿ) ದಿನಾಂಕ : 20.06.2026
ಸಂಖ್ಯೆ: ಇಡಿ/ಕೆಇಎ/09/ನೇ.ವಿ/2026 (ಕೆಕೆ) ದಿನಾಂಕ : 20.06.2026

## ಸೇರ್ಪಡೆ ಹಾಗೂ ಆನ್‌ಲೈನ್ ಅರ್ಜಿ ದಿನಾಂಕ ವಿಸ್ತರಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಕೃಷಿ ಅಧಿಕಾರಿ (AO) ಹಾಗೂ ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳ ನೇಮಕಾತಿಗಾಗಿ ದಿನಾಂಕ 30.05.2026 ರಂದು ಪರಿಷ್ಕೃತ ಅಧಿಸೂಚನೆ ಹೊರಡಿಸಿ ದಿನಾಂಕ: 20.06.2026 ರವರೆಗೆ ಅರ್ಜಿ ಸಲ್ಲಿಸಲು ಹಾಗೂ ದಿನಾಂಕ: 22.06.2026 ರವರೆಗೆ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿತ್ತು.

ಸರ್ಕಾರದ ಅಧಿಸೂಚನೆ ಸಂಖ್ಯೆ : ಇಡಿ 279 ಟೆಇಸಿ 2026 ದಿನಾಂಕ 19.06.2026 ರನ್ವಯ ಬಿ.ಇ ಬಯೋಟೆಕ್ನಾಲಜಿ ಪದವಿಯನ್ನು ಉನ್ನತ ಶಿಕ್ಷಣ, ಉದ್ಯೋಗ, ಶೈಕ್ಷಣಿಕ ಪ್ರಗತಿ ಹಾಗೂ ಇತರ ಸಂಬಂಧಿತ ಉದ್ದೇಶಕ್ಕಾಗಿ ಬಿ.ಟೆಕ್ ಬಯೋಟೆಕ್ನಾಲಜಿ ಪದವಿಗೆ ಶೈಕ್ಷಣಿಕವಾಗಿ ಸಮಾನವೆಂದು ಪರಿಗಣಿಸಲು ತಿಳಿಸಿರುವುದರಿಂದ ಹಾಗೂ ಕೃಷಿ ಇಲಾಖೆಯ ಪತ್ರ ದಿನಾಂಕ 19.06.2026 ರಲ್ಲಿ ಕೃಷಿ ಅಧಿಕಾರಿ (AO) ಹಾಗೂ ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳಿಗೆ ಬಿ.ಇ ಬಯೋಟೆಕ್ನಾಲಜಿ ಪದವಿಯ ಅಭ್ಯರ್ಥಿಗಳನ್ನು ಪರಿಗಣಿಸಲು ಮತ್ತು ದಿನಾಂಕ 25.06.2026 ರವರೆಗೆ ಅರ್ಜಿ ಸಲ್ಲಿಕೆಯನ್ನು ವಿಸ್ತರಿಸಲು ತಿಳಿಸಲಾಗಿರುತ್ತದೆ.

ಆದ್ದರಿಂದ ಕೃಷಿ ಅಧಿಕಾರಿ (AO) ಹಾಗೂ ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳಿಗೆ **ಬಿ.ಇ ಬಯೋಟೆಕ್ನಾಲಜಿ** ಪದವಿಯ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಕೆ ವೇಳಾಪಟ್ಟಿ:

- ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **25.06.2026 ಸಂಜೆ 4.00 ರೊಳಗೆ**
- ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: **25.06.2026 ಸಂಜೆ 5.00 ರೊಳಗೆ**

ಕಾರ್ಯನಿರ್ವಾಹಕ ನಿರ್ದೇಶಕರು

**ಸೂಚನೆ:** ಉಳಿದಂತೆ ಸದರಿ ಪರಿಷ್ಕೃತ ಅಧಿಸೂಚನೆಗಳು ದಿನಾಂಕ 30.05.2026 ರಲ್ಲಿ ಹಾಗೂ ಸೇರ್ಪಡೆ ಅಧಿಸೂಚನೆ ದಿನಾಂಕ 01.06.2026 ರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in